MR. SPEAKER.—I am sorry to say that the hon. member's conduct is not in order. He may Please resume his seat. He is a senior member.

SRI B.B. SAYANAK.—No, Sir. Always you are doing injustice to me. Whenever my questions come up you are not allowing. You say I am a senior most member.

MR. SPEAKER.—Is the hon. member threatening me?

SRI B.B. SAYANAK,—I am not threating. If this is the attitude I will stage a walk out in protest of your attitude.

MR. SPEAKER.—I am not permitting you. I have called another Question.

Bore wells in Varthur and Krishnarajpuram Hoblies

488 SRI B. V. RAMACHANDRA REDDY (Varthur).—Will the Minister for Rural Development & Panchayati Raj be pleased to state:—

(a) The No. of bore wells sunk and fitted with pumps in Varthur and Krishnarajapuram Hoblies ;

(b) the No. of sanctioned schemes under NRWS to which 10% Panchayat contribution is recovered by the Government and stage of these schemes at present;

(c) The action the Government proposes to take this year in solving the Drinking water problem in these 16 villages in Varthur and Krishnarajapuram Hoblies.

(1) Haralore
(2) Devarabisanahally
(3) Kaikondrahally
(4) Kasavanahally
(5) Mullur
(6) Gunjur
(7) Balagere
(8) Nellurahally
(9) Sadara Mangala
(10) Somsenahally
(11) Vijayapura Harijan Colony
(12) Ramamurthynagar
(13) Subbaiahpalya

(14) Bande Palya

(15) Chelekere Megina Palya

(16) Babasahib Palya.

SRI K. PRABHAKAR (Minister for Rural Development and Panchayati Raj,—

(a)

Varthur Hobli		Krishnarajapura Hobli	
Sunk	*Successful*	*Sunk*	*Successful*
21	17	52	37

(b) 27 as in list appended

(c) 2 Bore wells in each of the villages of Haralore, Gunjur, Vijayapura and Chelekere, were sunk. The Bore wells at Gunjur, Vijayapura and Chellekere have been found to be successful. Similarly 1 Bore well in each of the villages of Nellurahally, Ramamurthynagar and Babusahib Palya were sunk but they have failed to yield sufficient water Action will be taken to provide Bore wells to the nine villages which have not yet been tackled and the villages where the borewells have failed, during the current financial year, as a special case though these villages are not found in the list of villages identified by the Public Health Engineering Department, in the survey conducted during 1974.

STATEMENT

List of NRWS Schemes sanctioned in Varthur and Krishnarajapuram Hoblies of Bangalore South Taluk

Sl. No.	Name of Village	Stage of work
1	Konena Agrahara	Works completed
2	Kengeri	do
3	Agara	do
4	Kumbalagud	do
5	Krishnarajapura	do
6	White Field	do
7	Kaggalipura	do
8	Panathur	do
9	Kodathi	do
10	Alahalli	do
11	Begur	do

0	2	3
12	Doddenkundi	work completed
13	Burasandra Jogi Palya	do
14	Ammasandra Palya	do
15	Bellandur	do
16	Ramagondanahalli	do
17	Kumpapura Yemalur	do
18	Marathahalli	do
19	Varthur	The work nearing completion.
20	Hoodi	All components of the work completed but power supply awaited.
21	Hongasandra	Source is being finalised.
22	Sorahunse	Source finalised. Works are being entrusted to the contractors.
23	Uttarahalli	do
24	Somanahalli	do
25	Pattandur Agrahara	Source to be finalised and works to be entrusted,
26	Hulimavu	Source finalised and works to be entrusted.
27	B Narayanapura	Source to be finalised and works to be entrusted.

ಶ್ರೀ ಬಿ ವಿ. ರಾಮಚಂದ್ರರೆಡ್ಡಿ.—ವರ್ತೂರು ಹೋಬಳಿಯಲ್ಲಿ ೨೧ ಭಾವಿಗಳನ್ನು ತೋಡಿದ್ದು ಆದರಲ್ಲಿ ೧೭ ಭಾವಿಗಳು ಯಶಸ್ವಿಯಾಗಿವೆ ಎಂದು ಹೇಳಿದ್ದೀರಿ ಬಾಕಿ ಬಾವಿಗಳನ್ನು ಯಾವಾಗ ತೋಡಿಸಿ ಕೊಡುತ್ತೀರಿ ?

† ಶ್ರೀ ಕೆ. ಪ್ರಭಾಕರ್.—ಆದಷ್ಟು ಬೇಗ ತೋಡಿಸಿ ಕೊಡುತ್ತೇವೆ.

ಶ್ರೀ ಬಿ.ವಿ. ರಾಮಚಂದ್ರರೆಡ್ಡಿ.—ಸ್ವಾಮಿ ನಾವು ಮಂತ್ರಿಗಳವರ ಹತ್ತಿರ ಪ್ರಶ್ನೆ ಕೇಳಬೇಕಾದರೆ ಯೋಚನೆ ಮಾಡಬೇಕಾಗಿದೆ, ಇಲ್ಲದಿದ್ದರೆ ಸುಮ್ಮನೇ ಇದ್ದು ಬಿಡಬೇಕಾಗಿದೆ. ಯಾವಾಗ ತೋಡಿಸಿ ಕೊಡುತ್ತೀರಿ ಅಂತ ಕೇಳಿದ್ದಕ್ಕೆ ಆದಷ್ಟು ಬೇಗ ಮಾಡಿಸಿ ಕೊಡುತ್ತೇವೆಂದು ಹೇಳಿ ಬಿಟ್ಟರು. ಈಗ ೯ ಗ್ರಾಮಗಳಲ್ಲಿ ಅವರ ಲಿಸ್ಟ್‌ನಲ್ಲಿ ಇಲ್ಲದೇ ಹೋದರೂ ತೋಡಿಸಿ ಕೊಡುತ್ತೇವೆಂದು ಹೇಳಿದ್ದಾರೆ ಆದೇ ರೀತಿ ಇನ್ನು ೧೫ ಹರಿಜನ ಕಾಲೊನಿಗಳು ಇದ್ದಾವೆ ಅದರಲ್ಲಿ ಹರಿಜನರ ಕಾಲೋನಿ ಎಂದರೆ ಅವರೆ ಮೆಜಾರಿಟಿ ಪಾಪ್ಯುಲೇಷನ್ ಇರುವ ಹಳ್ಳಿಗಳು ಆದರಲ್ಲಿ ದೇವರಬೀಸನ ಹಳ್ಳಿ ಮತ್ತು ಕಸವನ ಹಳ್ಳಿ ಇದು ಮಾನ್ಯ ಮಂತ್ರಿಗಳವರಿಗೂ ಗೊತ್ತು, ಇವುಗಳನ್ನು ಸಪ ಸೇರಿಸಿಕೊಂಡು ಯಾವಾಗ ಮಾಡಿಸಿಕೊಡುತ್ತೀರಾ ಎಂದು ಕೇಳುತ್ತೇನೆ.

ಶ್ರೀ ಕೆ. ಪ್ರಭಾಕರ.—ಪಟ್ಟಿಯಲ್ಲಿರುವುದನ್ನು ಮೊದಲು ಪ್ರಾರಂಭಿಸಿ ಮಾಡಿ ಮುಗಿಸುತ್ತೇವೆ ಆ ಮೇಲೆ ನೀವು ಕೊಟ್ಟಿರುವುದನ್ನು ಸೇರಿಸಿಕೊಂಡು ಅವುಗಳನ್ನು ಮಾಡುವುದಕ್ಕೆ ಯೋಚನೆ ಮಾಡಿ ಮಾಡಿಸಿಕೊಡುತ್ತೇವೆ.

ಶ್ರೀ ಬಿ.ವಿ. ರಾಮಚಂದ್ರರೆಡ್ಡಿ.—ನನ್ನ ಎರಡನೆಯ ಪ್ರಶ್ನೆಗೆ ೨೭ ಯೋಜನೆಗಳು ಇದೆಂದು ಹೇಳಿದ್ದೀರಿ, ಆದರಲ್ಲಿ ೧೮ ಮುಗಿದಿದೆ ಇನ್ನು ೯ ಬಾಕಿ ಉಳಿದಿದೆಂದು ಹೇಳಿದ್ದೀರಿ, ಎಲ್ಲಾ ಪಂಚಾಯಿತಿಯವರೂ ಹಣ ಕಟ್ಟಿದ್ದಾರೆ, ಆದುದರಿಂದ ಅದನ್ನು ಮಾಡಿಸಿಕೊಡುವುದಕ್ಕೆ ಇನ್ನು ಎಷ್ಟು ವರ್ಷಗಳ ಕಾಲ ಬೇಕಾಗುತ್ತದೆ ಸ್ವಾಮಿ.

ಶ್ರೀ ಕೆ. ಪ್ರಭಾಕರ್.—ವರ್ಷಗಳೇನೂ ಬೇಕಾಗುವುದಿಲ್ಲ, ಭೂಗರ್ಭ ಶೋಧನೆ ಕೆಲಸದಿಂದ ತಡವಾಗಿದೆ ತಜ್ಞರ ಅಭಿಪ್ರಾಯ ಕೊಟ್ಟಕೂಡಲೇ ಆದಷ್ಟು ಬೇಗನೆ ಪೂರೈಸುವುದಕ್ಕೆ ಪ್ರಯತ್ನ ಮಾಡುತ್ತೇವೆ ಇದರಲ್ಲಿ ಅನಾವಶ್ಯಕವಾಗಿ ಕಾಲ ಕಳೆಯುವ ಪ್ರಶ್ನೆ ಇಲ್ಲ.

ಶ್ರೀ ಬಿ.ವಿ. ರಾಮಚಂದ್ರರೆಡ್ಡಿ.—ಸ್ವಾಮಿ, ಇವರ ಇಲಾಖೆಯಲ್ಲಿ ಕೆಲಸವೇ ನಡೆದಿರುವುದಿಲ್ಲ ಈಗ ಇನ್ನೊಂದು ಇಲಾಖೆಯವರ ಮೇಲೆ ಜವಾಬ್ದಾರಿ ಹೊರಿಸಿ ತಪ್ಪಿಸಿಕೊಳ್ಳುವುದಕ್ಕೆ ನೋಡುತ್ತಿದ್ದಾರೆ ಭೂಗರ್ಭ ಸಂಶೋಧನಾ ಇಲಾಖೆ ಮಾನ್ಯ ಮುಖ್ಯಮಂತ್ರಿಗಳವರ ವಶದಲ್ಲಿದೆ ಆದುದರಿಂದ ಅವರಿಗೆ ಈ ಪ್ರಶ್ನೆಯನ್ನು ಕೇಳುವುದಕ್ಕೆ ತಾವು ಅನುಮತಿ ಕೊಡಬೇಕು. ಪಂಚಾಯಿತಿಯವರು ಹಣ ಕಟ್ಟಿ,ಡೆಪ್ಯುಟಿ ಕಮಿಷನರ್‌ರವರು ರಿಪೋರ್ಟ್ ಕಳುಹಿಸಿ ಎಲ್ಲಾ ಆದ ಮೇಲೆ ಅಲ್ಲಿ ಜಲ ಇದೆಯೋ ಇಲ್ಲವೋ ಎನ್ನುವ ಬಗ್ಗೆ ಶೋಧನೆಯೊಗುವುದಕೋಸ್ಕರವಾಗಿ ವರ್ಷಾನುಗಟ್ಟಲೆಯಾಗುತ್ತಿದೆ, ಇದಕ್ಕೆ ಕಾರಣ ನಿಮ್ಮ ಭೂಗರ್ಭ ಸಂಶೋಧನಾ ಇಲಾಖೆಯ ಅಧಿಕಾರಿಗಳ ಅಲಕ್ಷ್ಯತನದಿಂದ ಆಗುತ್ತಿರಬಹುದು, ಆದುದರಿಂದ ಇನ್ನು ಮುಂದಾದರೂ ಪರಿಹಾರ ಮಾಡುವುದಕ್ಕೆ ಏನಾದರೂ ಕ್ರಮ ತೆಗೆದುಕೊಳ್ಳುತ್ತೀರಾ ಸ್ವಾಮಿ?

ಶ್ರೀ ಡಿ. ದೇವರಾಜ್ ಅರಸ್.—ಸ್ವಾಮಿ ಬೋರ್‌ವೆಲ್ಸ್‌ಗಳನ್ನು ತೆಗೆಯಬೇಕಾದರೆ ತಜ್ಞರ ಅಭಿಪ್ರಾಯ ಪಡೆಯದೇ ತೆಗೆಯುವುದರಿಂದ ಆಗತಕ್ಕ ಅನಾಹುತ ಏನು ಎಂಬುದು ತಮಗೆಲ್ಲಾ ಗೊತ್ತಿದೆ. ಎಷ್ಟೋ ಸಾರಿ ತಜ್ಞರು ಹೇಳಿದರೂ ಕೂಡ ಶೇಕಡ ೨೦ ೩೦ ರಷ್ಟು ಫೇಲ್ಯೂರ್ ಆಗಿರುತ್ತದೆ. ಆದುದರಿಂದ ಈಗ ಯಾವ ಯಾವ ಹಳ್ಳಿಗಳಲ್ಲಿ ತಜ್ಞರು ಅಭಿಪ್ರಾಯ ಕೊಡದೇ ಇರುವುದರಿಂದ ತಡವಾಗಿದೆಂದು ಹೇಳಿದಿರಿ, ಅದರಿಂದ ರೈತರಿಗೆ ತೊಂದರೆಯಾಗುತ್ತಿದೆಂದು ತಾವು ಅಭಿಪ್ರಾಯ ಪಡುವುದಾದರೆ ಎಷ್ಟು ಬೇಗನೆ ಮಾಡಲಿಕ್ಕೆ ಸಾಧ್ಯವೋ ಅಷ್ಟು ಬೇಗನೆ ಮಾಡಲು ಪ್ರಯತ್ನಿಸುತ್ತೇನೆ.

ಶ್ರೀ ಎಸ್.ಆರ್. ಬೊಮ್ಮಾಯಿ.—ಸ್ವಾಮಿ ನನ್ನ ಅನುಭವದಿಂದ ಹೇಳುವುದಾದರೆ ನಾನು ಇದೇ ವರ್ಷ ಯಾವ ತಜ್ಞರ ಅಭಿಪ್ರಾಯ ತೆಗೆದುಕೊಳ್ಳದೇ ಬಾವಿ ಹಾಕಿಸಿದ್ದೇನೆ, ಆದು ಸುಮಾರು ೨೫೦ ಫುಟ್ ಆಳ ಹೋಗಿದೆ ಅದಕ್ಕೆ ೮ ಸಾವಿರ ಖರ್ಚು ಮಾಡಿದ್ದೇನೆ ೧೫೦ ಲೀಟರ್ ನೀರು ಬರುತ್ತಿದೆ.

ಶ್ರೀ ಡಿ. ದೇವರಾಜ ಅರಸ್.—ಒಂದೊಂದು ಸಾರಿ ಏನಾಗುತ್ತದೆಂದರೆ ಆದಕ್ಕೆ ಒಂದು ಗಾದೆ ಇದೆ ಕುರುಡುತನದಿಂದ ಸರಿಯಾಗಿ ಬಿಡುತ್ತದೆ. ಟೆಕ್ನಿಕಲ್ ನೋ ಹೌ ತಿಳಿಯದೇ ಎಷ್ಟೋ ಜನ ನಮ್ಮ ಪೂರ್ವಿಕರು ಜಲ ಶಾಸ್ತ್ರದಿಂದ ಭಾವಿಗಳನ್ನು ತೆಗೆದಿದ್ದಾರೆ ಆದರಲ್ಲೆಲ್ಲಾ ನೀರು ಬಂದಿಲ್ಲವೇ ? ಆದರೆ ಆದೇ ಸರಿ ಎಂದು ಹೇಳುವುದು ತಪ್ಪಾಗುತ್ತದೆ. ಈಗ ಭಾವಿಗಳನ್ನು ತೋಡುವುದರಲ್ಲಿ ಅನೇಕ ಲೇಟೇಸ್ಟ್ ಇನ್ಸ್‌ಸ್ಟ್ರುಮೆಂಟ್ಸ್‌ಗಳು ಬಂದಿದೆ. ಆದುದರಿಂದ ಈ ಪದ್ಧತಿಯನ್ನು ನಾವು ಕಂಪ್ಲೀಟ್ ಆಗಿ ಬೇಡವೆಂದು ಹೇಳುವುದಕ್ಕಾಗುವುದಿಲ್ಲ. ಇನ್ನು ಕೆಲವರು ಒಂದು ಕಡ್ಡಿ ಹಿಡಿದುಕೊಂಡು ಇಂಥಾ ಕಡೆ ನೀರು ಬರುತ್ತದೆಂದು ಹೇಳುವುದು ಉಂಟು, ಅವರದು ಸಹ ಒಂದೊಂದು ಸಾರಿ ಜಯಪ್ರದವಾಗುತ್ತದೆ ಒಂದೊಂದು ಸಾರಿ ಆಗುವುದಿಲ. ಉದಾಹರಣೆಗೆ, ಹಾಸನ ಜಿಲ್ಲೆಯಲ್ಲಿ ನಡೆದದ್ದು ನನಗೆ ಜ್ಞಾಪಕ ಇದೆ, ಬೇಲೂರಿನಿಂದ ಆ ಕಡೆ ಒಂದು ದೊಡ್ಡ ಊರು ಇದೆ ಇಲ್ಲಿ ಒಬ್ಬರು ಹೀಗೆ ಕಡ್ಡಿ ಹಿಡಿದವರ ಕೈಯಲ್ಲಿ ಪರೀಕ್ಷೆ ಮಾಡಿಸಿದರು, ನಂತರ ೨೫ ಸಾವಿರ ರೂಪಾಯಿಗಳನ್ನು ಖರ್ಚುಮಾಡಿ ಭಾವಿ ತೋಡಿದರೂ ಅಲ್ಲಿ ನೀರು ಬರಲಿಲ್ಲ. ಈ ಪದ್ಧತಿಯೂ ಇದೆ, ಆ ಪದ್ಧತಿಯು ಇದೆ. ನಮ್ಮ ಜೀಯಾಲಜಿಸ್ಟ್ ಮಾಡುವುದು ನೂರಕ್ಕೆ ನೂರು ಪಾಲು ಸರಿ ಎಂದು ನಾನು ಹೇಳುವುದಿಲ್ಲ, ಏಕೆಂದರೆ ಅವರು ಮಾಡುವುದರಲ್ಲೂ ಫೆಯಿಲ್ ಆಗುತ್ತದೆ.